# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಸುಂದರ ಪೂಜಾರಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಂದಾರು ಗ್ರಾಮ ಪಂಚಾಯತಿ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ – ಅಂತಿಮ ಆದೇಶ ಹೊರಡಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/308/ಗ್ರಾಪಂಕಾ/2013, ದಿನಾಂಕ:28–11–2013 ಮತ್ತು 28–10–2013.
2. ಅಪರ ನಿಬಂಧಕರು ವಿಚಾರಣೆಗಳು–8, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: LOK/14-A/ENQ/505/2013/ARE-8, ದಿನಾಂಕ:16-10-2017.
3. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK/ INQ/14- A/505/2013/ARE-8, ದಿನಾಂಕ:19-10-2017.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: LOK/ INQ/14- A/505/2013/ARE-8, ದಿನಾಂಕ:21-10-2017.
5. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ/790/ಗ್ರಾಪಂಕಾ/2017, ದಿನಾಂಕ:29–11–2017.
6. ಶ್ರೀ ಸುಂದರ ಪೂಜಾರಿ ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:02–01–2018.

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಸುಂದರ ಪೂಜಾರಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಂದಾರು ಗ್ರಾಮ ಪಂಚಾಯತಿ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14–ಎ ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಯಿತು. ಆದರಂತೆ ಅಪರ ನಿಬಂಧಕರು ವಿಚಾರಣೆಗಳು–8, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11 ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ":**

"That You DGO Sri Sundar Poojari, the then Grama Panchayat Secretary, Banduru Grama Panchayat, Belthangadi Taluk, Dakshina Kannada District, while discharging your duties;

a)by the order of the Hon'ble Upalokayukta by letter no.Compt/Uplok/MYS/432/2009/ARE-7, dt.13/12/2012, you were called upon to file your objection statement or comments in duplicate on or before 05/01/2013, in respect of the complaint lodged by Sri.Krishnappa Gowda, a copy of which was already served on you, but you failed to give your reply/objection statements or comments;

b)by letter No. Compt/Uplok/MYS/432/2009/ARE-7, dt.22/03/2013, you were once again called upon to submit your reply/comments with in

27/03/2013 but you failed to give your reply/objection statements or comments;

c)by letter No. Compt/Uplok/MYS/432/2009/ARE-7, dt.22/04/2013, you once again called upon to submit your reply/comments within 18/05/2013 but you failed to give your reply/objection statements or comments;

d)by show cause notice No. Compt/Uplok/MYS/432/2009/ARE-7, dt.21/05/2013, you were informed that you have not submitted your reply in the matter inspite of letters and reminders and therefore a show cause notice was ordered as directed by Hon'ble Upalokayukta as to why Disciplinary Action should not be initiated against against you for not submitting your reply in time, which amounts to misconduct and time was granted up to 10/06/2013;

e) the said show cause notice is served on you on 06/06/2013 through Mangalore Lokayukta Police, even then you failed to submit your objection/reply;

and thereby failed to maintain absolute integrity and devotion to duty and committed an act which is unbecoming of a Government servant and thus guilty of misconduct under Rule 3(1)(i) to (iii) of KCS (Conduct) Rules 1966".

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಸುಂದರ ಪೂಜಾರಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಂದಾರು ಗ್ರಾಮ ಪಂಚಾಯತಿ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಅಂಗೀಕರಿಸಿ ಶ್ರೀ ಸುಂದರ ಪೂಜಾರಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಂದಾರು ಗ್ರಾಮ ಪಂಚಾಯತಿ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(viii)ರ ಅನ್ವಯ **"ನಿವೃತ್ತಿ ಸೌಲಭ್ಯದ ಶೇ5ರಷ್ಟು ಮೊತ್ತವನ್ನು ಒಂದು ವರ್ಷದ ಅವಧಿಗೆ ಕಟಾಯಿಸುವ"** ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ ಸುಂದರ ಪೂಜಾರಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಂದಾರು ಗ್ರಾಮ ಪಂಚಾಯತಿ, ಇವರಿಗೆ ನಿಯಮಾನುಸಾರ ಕ್ರಮಸಂಖ್ಯೆ (5) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಅವರು ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ತಾವು ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕು, ಬಂದಾರು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯಾಗಿದ್ದ ಸಮಯ ದಿನಾಂಕ:28/10/2013 ಮತ್ತು 28/11/2013ರ ಆದೇಶದಂತೆ ತಮ್ಮನ್ನು ಸರಕಾರಿ ಹುದ್ದೆಯಿಂದ ಅಮಾನತ್ತು ಆದೇಶ ಮಾಡಿದ ಕಾರಣ ತಾವು ಸದ್ರಿ ಆದೇಶವನ್ನು ಜಿಲ್ಲಾ ಪಂಚಾಯತ್ ಪ್ರಾಧಿಕಾರದ ಮುಂದೆ ಅಪೀಲು ಸಲ್ಲಿಸಿ ವ್ಯವಹರಿಸುತ್ತಿದ್ದೆನು. ಅದೇ ಸಮಯದಲ್ಲಿ ಉಪಲೋಕಾಯುಕ್ತ ಕಛೇರಿಯಿಂದ ತಮಗೆ ಕಾರಣ ಕೇಳುವ ನೋಟೀಸುಗಳು ಬಂದಿದ್ದವು. ತಾವು ಅಮಾನತ್ತಿನಲ್ಲಿದ್ದ ಸಮಯ ತಾವು ಮನಸ್ಸಿಗೆ ಆಘಾತವಾಗಿ ಖಿನ್ನತೆಯಿಂದ ತಮ್ಮ ಮನಸ್ಸಿನಲ್ಲಿ ನಾನಾ ರೀತಿಯ ಬೇಸರಗಳು ಮರುಕಳಿಸುತ್ತಿದ್ದುದರಿಂದ ತಮ್ಮ

ನೋಟೀಸಿಗೆ ಜವಾಬು ಕೊಡಲು ತಮಗೆ ಅಸಾಧ್ಯವಾಗಿರುತ್ತದೆ. ಇದೀಗ ತಾವು ನನ್ನ ನಿವೃತ್ತಿ ವೇತನದಲ್ಲಿ 0.05 ಶೇಕಡಾವನ್ನು ಒಂದು ವರ್ಷದ ಮಟ್ಟಿಗೆ ಕಡಿತ ಮಾಡಲಾಗುವುದೆಂದು ತಿಳಿಸಿದ್ದು, ತಮಗೆ ಆಘಾತವಾಗಿರುತ್ತದೆ. ತಾವು ಬಡವನಿದ್ದು, ಯಾವುದೇ ಜಮೀನು ಯಾ ವರಮಾನ ಗಳಿಸುವ ವ್ಯವಹಾರವಿರುವುದಿಲ್ಲ. ಆ ಕಾರಣ ನನ್ನ ಮೇಲೆ ಕರುಣೆ ತೋರಿ ತಮ್ಮ ನಿವೃತ್ತಿ ವೇತನದಲ್ಲಿ ಯಾವುದೇ ಕೊರತೆ ಆಗದಂತೆ ತಾವು ಸಹಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ".

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ಪ್ರಮುಖವಾಗಿ ವರದಿಯಲ್ಲಿ ಮೇಲ್ಕಂಡ ಅಂಶಗಳನ್ನು ಅಲ್ಲಗಳೆಯಲು ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ. ಅವುಗಳ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ.

"The DGO has also confronted a notice dt.30-05-2008 issued by the Executive Officer, Taluk Panchayat to the DGO, during the cross examination of PW-1, the same is marked as Ex p-1. PW-1 who is the Scrutiny Officer has admitted in the cross examination that he had come to know about the enquiry initiated against the DGO by the Disciplinary Authority. However, the DGO has not filed any comments in the complaint case registered before the Lokayukta.

PW-1 has also stated about issuance of the notice dt.22-03-2013 as per Ex.P-5 and also a reminder dt.22-04-2013 as per Ex.P-6. However, there is nothing to show whether those notices were served on the DGO.

PW-1 has stated that a show cause notice dt.21-05-2013 was issued to the DGO as per Ex.P-7. The same was served on the DGO on 06-06-2013. The signature in Ex.P-7 of the DGO is not disputed. In spite of the show cause notice as per Ex.P-7, the DGO has not submitted any reply or response to the said show cause notice nor filed any comments or objections to the complaint. Since the DGO failed to make any response , the enquiry officer PW-1 made a note as per Ex.P-8 which was approved by the Hon'ble Upalokayukta-2, PW-1 has stated about the same in his Chief Examination. The defense of the DGO is that, he has not submitted the comments since an enquiry was already initiated against him by the Chief Executive Officer of Zilla Panchayath regarding the same matter and therefore, he did not respond to the show cause notice. The said explanation is not convincing. The failure to respond to the show cause notice dated:21-05-2013 shows the deliberate dereliction of duty of the DGO. On receiving a show cause notice from Hon'ble Upalokayuktha office, it was his duty to respond to the notice and to explain as to why action should not be taken against him and why he has not submitted any comments. The DGO has not examined himself or any witnesses on his behalf. The defense taken by him is not sustainable. There are no material elicited by the DGO in the cross examination of PW-1 to disbelieve his evidence. Under these circumstances, I am of the opinion that the Disciplinary Authority has been able to prove the charge leveled against the DGO.

For the aforesaid reasons, I am of the opinion that the disciplinary authority has proved the charge leveled against the DGO by preponderance of probabilities. Hence, they are answered in the affirmative. Therefore, the DGO has failed to maintain absolute integrity and devotion to duty and rendered himself has unbecoming of a Government servant and committed misconduct

with in the meaning of Rule 3(1)(i) to (iii) of the KCS (Conduct) Rules 1966. Hence, I have answered the point formulated above in the Affirmative".

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀರ್ವತೆಗೆ ಅನುಗುಣವಾಗಿ ಶ್ರೀ ಸುಂದರ ಪೂಜಾರಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಂದಾರು ಗ್ರಾಮ ಪಂಚಾಯತಿ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರಿಗೆ **"ನಿವೃತ್ತಿ ಸೌಲಭ್ಯದಲ್ಲಿ ಶೇಕಡ 5% ರಷ್ಟು ಮೊತ್ತವನ್ನು ಒಂದು ವರ್ಷ ಅವಧಿಗೆ ಕಡಿತಗೊಳಿಸುವ"** ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತವೆ. ಆದುದರಿಂದ ಶ್ರೀ ಸುಂದರ ಪೂಜಾರಿ, ಇವರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುತ್ತದೆ. ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಪರಿಶೀಲಿಸಿ ಶ್ರೀ ಸುಂದರ ಪೂಜಾರಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಂದಾರು ಗ್ರಾಮ ಪಂಚಾಯತಿ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ)ರನ್ವಯ ನಿವೃತ್ತಿ ಸೌಲಭ್ಯದಲ್ಲಿ ಶೇಕಡ 5% ರಷ್ಟು ಮೊತ್ತವನ್ನು ಒಂದು ವರ್ಷ ಅವಧಿಗೆ ಕಡಿತಗೊಳಿಸುವ ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/790/ಗ್ರಾಪಂಕಾ/2017,**
**ಬೆಂಗಳೂರು, ದಿನಾಂಕ:06-04-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಸರ್ಕಾರವು ಶ್ರೀ ಸುಂದರ ಪೂಜಾರಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಂದಾರು ಗ್ರಾಮ ಪಂಚಾಯತಿ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ)ರನ್ವಯ ನಿವೃತ್ತಿ ಸೌಲಭ್ಯದಲ್ಲಿ ಶೇಕಡ 5% ರಷ್ಟು ಮೊತ್ತವನ್ನು ಒಂದು ವರ್ಷ ಅವಧಿಗೆ ಕಡಿತಗೊಳಿಸುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್) 6/4
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಕ್ಷಿಣ ಕನ್ನಡ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
7. ಶ್ರೀ ಸುಂದರ ಪೂಜಾರಿ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಬಂದಾರು ಗ್ರಾಮ ಪಂಚಾಯತಿ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.